ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೊಮ್ಮನಹಳ್ಳಿ ವಿಭಾಗ

ಸಂಖ್ಯೆ:- ಕಾ.ಪಾ.ಅ/ಬೊ.ವಿ/ಪಿ.ಆರ್/ ೨೨ /2013-14

ಕಾರ್ಯಪಾಲಕ ಅಭಿಯಂತರರ ಕಛೇರಿ,
ಬೊಮ್ಮನಹಳ್ಳಿ ವಿಭಾಗ,
ಬೇಗೂರು ರಸ್ತೆ, ಬೊಮ್ಮನಹಳ್ಳಿ,
ಬೆಂಗಳೂರು - 68, ದಿನಾಂಕ: **29.09.2013**

ಇವರಿಗೆ,

M/s Sri Lakshmi Enterprises,
 # 5, VMK Reddy Building,
Hongasandra, Begur Road,
Bangalore – 560 068.

ಸರಬರಾಜು ಆದೇಶ ಪತ್ರ

ವಿಷಯ:- **ವಾರ್ಡ್ ಸಂಖ್ಯೆ: 175 (ಬೊಮ್ಮನಹಳ್ಳಿ)** ಯಲ್ಲಿ ಘನತ್ಯಾಜ್ಯ ವಿಲೇವಾರಿ ಮತ್ತು ಸ್ವಚ್ಛತಾ ಕೆಲಸಕ್ಕೆ ಅಗತ್ಯತೆಯಂತೆ, ವಾಹನ, ಸಲಕರಣೆ ಮತ್ತು ಪೌರಕಾರ್ಮಿಕರನ್ನು ಗುತ್ತಿಗೆ ಆಧಾರದ ಮೇಲೆ ಸರಬರಾಜು ಮಾಡಿ, ನಿಯೋಜಿಸುವ ಬಗ್ಗೆ.

ಉಲ್ಲೇಖ:-1. ಮಾನ್ಯ ಉಚ್ಚನ್ಯಾಯಾಲಯದ W.P.No.24739-24740/(PIL) ರ ಮಧ್ಯಂತರ ಆದೇಶ ದಿನಾಂಕ: 30.08.2013 ರಂತೆ.

2. ಮಾನ್ಯ ಆಯುಕ್ತರು ದಿನಾಂಕ 21.09.2013 ರಂದು ನಡೆಸಿದ ಸಭೆಯ ನಿರ್ಣಯ.

3. ಮಾನ್ಯ ಜಂಟಿ ಆಯುಕ್ತರು, (ಪೊಂ) ರವರು ಹೊರಡಿಸಿರುವ ದಿ: 23.09.2013ರ ಆದೇಶ ಪತ್ರ.

4. ಅಲ್ಪಾವಧಿ ಕೋಟೇಷನ್ ಪ್ರಕಟಣೆ ಸಂಖ್ಯೆ: ಕಾ.ಪಾ.ಅ/ಬೊ.ವಿ/ಪಿ.ಆರ್/19/2013-14, ದಿ:3.09.2013.

5. ದಿನಾಂಕ:28.09.2013 ರಂದು ಮಾನ್ಯ ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರು **Unit** ದರಗಳ ಕೋಟೇಷನ್‌ಗೆ ನೀಡಿರುವ ಅನುಮೋದನೆ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಾರ್ಡ್ ಸಂಖ್ಯೆ: **175-ಬೊಮ್ಮನಹಳ್ಳಿಯಲ್ಲಿ** ಘನತ್ಯಾಜ್ಯ ವಿಲೇವಾರಿ ಮತ್ತು ಸ್ವಚ್ಛತಾ ಕೆಲಸವನ್ನು ಇಲಾಖಾ ವತಿಯಿಂದ ಕೈಗೊಳ್ಳಲು ಉದ್ದೇಶಿಸಿರುವಂತೆ, ಸದರಿ ಕೆಲಸಕ್ಕೆ ಅಗತ್ಯತೆಗೆ ಅನುಗುಣವಾಗಿ ಬೇಕಿರುವ ವಾಹನ, ಸಲಕರಣೆ ಮತ್ತು ಪೌರಕಾರ್ಮಿಕರನ್ನು ಗುತ್ತಿಗೆ ಆಧಾರದ ಮೇಲೆ ನಿಯೋಜಿಸಿಕೊಳ್ಳಲು ಕೋಟೇಷನ್‌ಗಳನ್ನು ಆಹ್ವಾನಿಸಲಾಗಿದ್ದು, ಸದರಿ ಕೋಟೇಷನ್‌ನಲ್ಲಿ ತಾವು ಭಾಗವಹಿಸಿ, ನೀಡಿರುವ ಕನಿಷ್ಠ Unit ದರದ ಕೋಟೇಷನ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿರುತ್ತದೆ.

ಅದರಂತೆ, ಈ ಆದೇಶ ಪತ್ರದೊಂದಿಗೆ ಲಗತ್ತಿಸಿರುವ **Shedule –B** ರಲ್ಲಿ ವಿವರಿಸಿರುವಂತೆ, ಪ್ರತಿ ದಿನಕ್ಕೆ ಅಗತ್ಯವಿರುವ, ವಾಹನ, ಸಲಕರಣೆ ಮತ್ತು ಪೌರಕಾರ್ಮಿಕರನ್ನು ಸದರಿ ವಾರ್ಡ್‌ನ ಘನತ್ಯಾಜ್ಯ ವಿಲೇವಾರಿ ಮತ್ತು ಸ್ವಚ್ಛತಾ ಕೆಲಸಕ್ಕೆ **ದಿನಾಂಕ: 01.10.2013** ರಿಂದ ಜಾರಿಗೆ ಬರುವಂತೆ, ಸರಬರಾಜು ಮಾಡಲು ಹಾಗೂ ಮುಂದಿನ ಆದೇಶದವರೆವಿಗೂ ನಿಯೋಜಿಸಲು ಸೂಚಿಸಲಾಗಿದೆ.

ಕಾರ್ಯಪಾಲಕ ಅಭಿಯಂತರರು,
ಬೊಮ್ಮನಹಳ್ಳಿ ವಿಭಾಗ